**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ, ಸಿರುಗುಪ್ಪ**

**ಸಿ.ಸಿ. ನಂ. 1029/2016**

**ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2**

ಸಾಕ್ಷಿದಾರನ ಹೆಸರು : ಹೇಮರೆಡ್ಡಿ
ತಂದೆಯ ಹೆಸರು : ನಾಗಪ್ಪ
ವಯಸ್ಸು : 55 ವರ್ಷ
ಕೆಲಸ : ವ್ಯವಸಾಯ
ವಾಸ : ಸಿರುಗುಪ್ಪ

**ಸಾಕ್ಷಿಗೆ ದಿನಾಂಕಃ11.07.2023 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿಃ 1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 7-8 ವರ್ಷ ಗಳ ಹಿಂದೆ ಸಿರುಗುಪ್ಪ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಯಾವ ವಿಚಾರಕ್ಕೆ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

2. ದಿನಾಂಕ 07-05-2016 ರಂದು ಬೆಳಿಗ್ಗೆ 07-30 ಗಂಟೆಯಿದ 09-00 ಗಂಟೆಗೆಯವರೆಗೆ ಸಿರುಗುಪ್ಪ ಪಟ್ಟಣದ ಮಂಜುನಾಥ ಟಾಕೀಸ್ ಹತ್ತಿರ ಇರುವ ವಿಜಯನಗರ ಕಾಲುವೆಯ ಹತ್ತಿರ ನಿಪಿಃ 1 ರಂತೆ ಪಂಚನಾಮೆ ಮಾಡಿ ಸ್ಥಳದಿಂದ 1000 ರೂಪಾಯಿಗೆ ಸಮವಾಗುವ ಬಿಳಿ ಪೇಪರ್ ಗಳನ್ನು ಕಟ್

<u>ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2</u>

ಮಾಡಿ ಅದರ ಸುತ್ತಲು 1000 ರೂ ನೋಟಿಗೆ ಹೊಂದಿಕೊಳ್ಳುವಂತೆ ಬಣ್ಣವನ್ನು ಹಚ್ಚಿದ ಸುಮಾರು 8 ಕಟ್ ಗಳು, ಒಂದು ಬಿಳಿ ಹಾಳೆ ಬಂಡಲ್, ಸ್ಕಿಟ್ ಮಾರ್ಕರ್ ಸಾಬುನಿನಂತೆ ಇರುವ ಚಿಕ್ಕ ಕೇಕ್ ಗಳ ಒಂದು ರಟ್ಟಿನ ಬಾಕ್ಸ್, ಬಂಗಾರವೆಂದು ಮೋಸ ಮಾಡಲು ತಂದ ಲೋಹದ ಚಿಕ್ಕ ಚಿಕ್ಕ ತೊಗರಿ ಬೇಳೆ ಆಕಾರದ ಸುಮಾರು 200 ತುಂಡುಗಳು, ಪೇಪರ್ ಗೆ ಬಣ್ಣ ಹಚ್ಚಲು ಉಪಯೋಗಿಸಿರುವ ಒಂದು ಚಿಕ್ಕ ಬ್ರೆಷ್, ನೋಟಿನಂತೆ ಕಾಣುವ ಪೇಪರ್ ಗಳನ್ನು ಪ್ಯಾಕ್ ಮಾಡಲು 2 ಪ್ಲಾಸ್ಟಿಕ್ ರೋಲ್ ಗಳುಮತ್ತು ಬಿಳಿ ಬಣ್ಣದ ಇಂಡಿಕಾ ಕಾರ್ ಸಂಖ್ಯೆ ಕೆಎ-35-ಎನ್-3659 ಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ 1 ರಂತೆ ನನ್ನ ಸಮಕ್ಷಮ ಪಂಚನಾಮೆ ಮಾಡಿ ಸದರಿ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರು ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**